ಸಂ: ಬಿ9/ನೇಮಕಾತಿ/ವಿವ-4/2015-16

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರ ಕಚೇರಿ,
(ಮುಖ್ಯಸ್ಥರು, ಅರಣ್ಯ ಪಡೆ)
ಅರಣ್ಯ ಭವನ, ಮಲ್ಲೇಶ್ವರಂ,
ಬೆಂಗಳೂರು-3, ದಿನಾಂಕ: 12 -09-2017

ಇವರಿಗೆ,

1. ಸಂಬಂಧಿಸಿದ ಅರಣ್ಯ ಸಂರಕ್ಷಣಾಧಿಕಾರಿಗಳು
   ಹಾಗೂ ನೇಮಕಾತಿ ಪ್ರಾಧಿಕಾರಿ

**ತುರ್ತು**

2. ಸಂಬಂಧಿಸಿದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು
   ಹಾಗೂ ನೇಮಕಾತಿ ಪ್ರಾಧಿಕಾರಿ

**ವಿಷಯ:** 36 ಅರಣ್ಯ ರಕ್ಷಕ ಹುದ್ದೆಗಳಿಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ಹೊರಡಿಸಿ, ವೃತ್ತಿ ತರಬೇತಿಗೆ ನಿಯೋಜಿಸುವ ಕುರಿತು

**ಉಲ್ಲೇಖ:** 1. ಈ ಕಛೇರಿಯ ಅಧಿಸೂಚನೆ ಸಂಖ್ಯೆ: ಬಿ9-ನೇಮಕಾತಿ-ವಿವ-3/2015-16 ದಿನಾಂಕ: 23.03.2016
2. ಈ ಕಛೇರಿಯ ಪತ್ರ ಸಂಖ್ಯೆ: ಬಿ9/ನೇಮಕಾತಿ/ವಿವ-4/2015-16 ದಿನಾಂಕ: 26.04.2017
3. ಈ ಕಛೇರಿಯ ಪ್ರಕಟಣೆ ದಿನಾಂಕ: .09.2017

* * * * * *

ಉಲ್ಲೇಖ (1) ರ ಈ ಕಛೇರಿಯ ಅಧಿಸೂಚನೆಯಲ್ಲಿ 555 ಅರಣ್ಯ ರಕ್ಷಕ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿ, ಅಧಿಸೂಚನೆ ಹೊರಡಿಸಲಾಗಿತ್ತು. ನೇಮಕಾತಿ ಪ್ರಕ್ರಿಯೆಯನ್ನು ನಿಯಮಾನುಸಾರ ಈಗಾಗಲೇ ಅಂತಿಮಗೊಳಿಸಿ, ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಈ ಹುದ್ದೆಗಳಿಗೆ ಪ್ರಕಟಿಸಲಾಗಿರುತ್ತದೆ. ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿರುವ ಅಭ್ಯರ್ಥಿಗಳಿಗೆ ಮೂಲ ದಾಖಲೆಗಳನ್ನು ಇಲಾಖಾ ವಶ ನೀಡಲು ಮತ್ತು ವೈದ್ಯಕೀಯ ಪರೀಕ್ಷೆಗೆ ಹಾಜರಾಗಲು ಈಗಾಗಲೇ ತಿಳಿಸಲಾಗಿರುತ್ತದೆ.

ಮುಂದುವರೆದು, ಈಗಾಗಲೇ ಅರಣ್ಯ ರಕ್ಷಕ ಹುದ್ದೆಗೆ ಆಯ್ಕೆಯಾದ 416 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ಹೊರಡಿಸಿ, ವೃತ್ತಿ ತರಬೇತಿಯಲ್ಲಿರುತ್ತಾರೆ.

ಈ ಕಛೇರಿಯ ಪ್ರಕಟಣೆ ದಿನಾಂಕ: 27.03.2017 ರ ಅನುಬಂಧ – ಎ ಕಡೆಗೆ ನಿಮ್ಮ ಗಮನವನ್ನು ಸೆಳೆಯಲಾಗಿದೆ. ಸದರಿ ಪ್ರಕಟಣೆಯಲ್ಲಿ ಒಟ್ಟು 139 ಅಭ್ಯರ್ಥಿಗಳ ವೈದ್ಯಕೀಯ ವರದಿ, ಗೈರು ಹಾಜರಿ, ಪೂರ್ಣ ದಾಖಲೆಗಳನ್ನು ಸಲ್ಲಿಸದೇ ಇರುವುದು, ವೈದ್ಯಕೀಯ ವರದಿಯಂತೆ ಅನರ್ಹತೆ, ಇತ್ಯಾದಿಗಳ ಕುರಿತಂತೆ ಮಾಹಿತಿಯನ್ನು ಪ್ರಕಟಿಸಲಾಗಿದೆ. ಪ್ರಸ್ತುತ ಈ 139 ಅಭ್ಯರ್ಥಿಗಳ ಪೈಕಿ 36 ಅಭ್ಯರ್ಥಿಗಳ ಕುರಿತಂತೆ ಅರಣ್ಯ ರಕ್ಷಕ ಹುದ್ದೆಗೆ ಆಯ್ಕೆ ಹೊಂದಲು ಬೇಕಾಗಿರುವ ಎಲ್ಲಾ ದಾಖಲೆಗಳನ್ನು ಹಾಗೂ ವೈದ್ಯಕೀಯ ವರದಿ ಲಭ್ಯವಾಗಿರುತ್ತದೆ. ಹೀಗಾಗಿ, ಈ 36 ಅಭ್ಯರ್ಥಿಗಳು ಅರಣ್ಯ ರಕ್ಷಕ ಹುದ್ದೆಗೆ ಆಯ್ಕೆ ಹೊಂದಲು ಅರ್ಹರಾಗಿರುತ್ತಾರೆ. 36 ಅರಣ್ಯ ರಕ್ಷಕ ಹುದ್ದೆಗೆ ಆಯ್ಕೆ ಹೊಂದಿರುವ ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿಯನ್ನು ಈ ಪತ್ರದೊಂದಿಗೆ ಪ್ರಕಟಿಸಲಾಗಿದೆ ಹಾಗೂ ಈ ಅಭ್ಯರ್ಥಿಗಳಿಗೆ ಸ್ಥಳ ನಿಯುಕ್ತಿ ಆದೇಶವನ್ನು ಹೊರಡಿಸಲಾಗಿದೆ.

ಈ 36 ಅರಣ್ಯ ರಕ್ಷಕ ಹುದ್ದೆಗೆ ಆಯ್ಕೆ ಹೊಂದಿರುವ ಅಭ್ಯರ್ಥಿಗಳ ಕುರಿತಂತೆ ಕೈಗೊಳ್ಳಬೇಕಾದ ಕ್ರಮದ ಬಗ್ಗೆ ಉಲ್ಲೇಖ (2) ರ ಪತ್ರದಲ್ಲಿ ತಿಳಿಸಿರುವಂತೆ ಕ್ರಮ ಕೈಗೊಳ್ಳುವುದು. ಹೆಚ್ಚುವರಿ ವಿವರ ಈ ಕೆಳಕಂಡಂತಿದೆ.

1. ಅಭ್ಯರ್ಥಿಗಳು ನಿಮ್ಮ ಸಮ್ಮುಖ ದಿನಾಂಕ: 18.09.2017 ರಂದು ಹಾಜರಾಗುತ್ತಾರೆ. ಹಾಜರಾಗುವ ಸಮಯದಲ್ಲಿ ರೂ. 100/- ರ ಎರಡು ಛಾಪಾ ಕಾಗದದಲ್ಲಿ Indemnity Bond ಹಾಗೂ ಕರಾರು ಪತ್ರ

ಇಲಾಖೆಗೆ ಬರೆದು ನೀಡುತ್ತಾರೆ. ಈ ಕುರಿತಂತೆ ಪೂರ್ಣ ಮಾಹಿತಿ ದಿನಾಂಕ: 26.04.2017 ರ ಪತ್ರದಲ್ಲಿ ತಿಳಿಸಲಾಗಿರುತ್ತದೆ. ಅದರಂತೆ ಕ್ರಮ ಕೈಗೊಳ್ಳುವುದು.

2. ಅಭ್ಯರ್ಥಿಗಳಿಗೆ ಸದ್ಯದಲ್ಲಿಯೇ 9 ತಿಂಗಳ ವೃತ್ತಿ ತರಬೇತಿ ಪ್ರಾರಂಭವಾಗಲಿರುವುದು. ವೃತ್ತಿ ತರಬೇತಿ ಕುರಿತಂತೆ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಮಾನವ ಸಂಪನ್ಮೂಲ ಅಭಿವೃದ್ಧಿ, ಧಾರವಾಡ ಇವರಿಂದ ವೇಳಾ ಪಟ್ಟಿ ಬಂದ ನಂತರವೇ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ಹೊರಡಿಸಲು ತಿಳಿಸಿದೆ ಹಾಗೂ ಸೂಕ್ತ ಸಮಯಕ್ಕೆ ಸರಿಯಾಗಿ ವೃತ್ತಿ ತರಬೇತಿಗಾಗಿ ತರಬೇತಿ ಕೇಂದ್ರಗಳಿಗೆ ಅಭ್ಯರ್ಥಿಗಳನ್ನು ನಿಯೋಜಿಸಲು ಕ್ರಮ ಕೈಗೊಳ್ಳುವುದು.

3. ಅಭ್ಯರ್ಥಿಗಳ ಕುರಿತಂತೆ ದಿನಾಂಕ: 26.04.2017 ರ ಪತ್ರದಲ್ಲಿ ತಿಳಿಸಿರುವಂತೆ ಎಲ್ಲಾ ಪೂರ್ವ ಸಿದ್ದತೆ ಕ್ರಮಗಳನ್ನು ಕೈಗೊಳ್ಳಲು ತಿಳಿಸಿದೆ. ತರಬೇತಿಯ ವೇಳಾ ಪಟ್ಟಿ ಸ್ವೀಕರಿಸುವ ವರೆಗೆ ನೇಮಕಾತಿ ಆದೇಶ ಹೊರಡಿಸಬಾರದಾಗಿ ಮತ್ತೊಮ್ಮೆ ತಿಳಿಸಲಾಗಿದೆ.

4. ಶ್ರೀ ಪ್ರಭು ಟಿ., ನೋಂದಣಿ ಸಂಖ್ಯೆ: 61855, ಶ್ರೀ ಸಿದ್ದಲಿಂಗಪ್ಪ, ನೋಂದಣಿ ಸಂಖ್ಯೆ: 62813 ಇವರುಗಳ ಕುರಿತಂತೆ ವೈದ್ಯಕೀಯ ಪರೀಕ್ಷೆಯು ಬಾಕಿ ಇದ್ದು, ಈ ಪರೀಕ್ಷೆಯನ್ನು ಸರ್ಕಾರಿ ವೈದ್ಯರಿಂದ ನಡೆಸಿ, ಅಭ್ಯರ್ಥಿ ಅರ್ಹರಾದಲ್ಲಿ ಮಾತ್ರ ನೇಮಕಾತಿ ಆದೇಶ ಹೊರಡಿಸುವುದು ಹಾಗೂ ಶ್ರೀ ನಾಗಪ್ಪ, ನೋಂದಣಿ ಸಂಖ್ಯೆ: 62474, ಶ್ರೀ ಮಲ್ಲಪ್ಪ ಒಡೆಯರ್, ನೋಂದಣಿ ಸಂಖ್ಯೆ: 62824, ಶ್ರೀ ಶರಣಪ್ಪ ಹೆಚ್. ಎಸ್., ನೋಂದಣಿ ಸಂಖ್ಯೆ: 65413 ಇವರುಗಳು Karnataka State Council of Vocational Education ನಲ್ಲಿ ವ್ಯಾಸಾಂಗ ಮಾಡಿದ್ದು, ಈ ವಿದ್ಯಾರ್ಹತೆಯು ಪಿ.ಯು.ಸಿ. ಅಥವಾ ತತ್ಸಮಾನದ ವ್ಯಾಪ್ತಿಯೊಳಗೆ ಬರುವ ಬಗ್ಗೆ ಕರ್ನಾಟಕ ಪದವಿ ಪೂರ್ವ ಮಂಡಳಿಯಿಂದ ಸ್ಪಷ್ಟೀಕರಣ ಪಡೆದು, ವಿದ್ಯಾರ್ಹತೆ ಕುರಿತು ಅರ್ಹರಿದ್ದಲ್ಲಿ ಮಾತ್ರ ನೇಮಕಾತಿ ಆದೇಶ ಹೊರಡಿಸುವುದು.

5. ಅಭ್ಯರ್ಥಿಗಳು ದಿನಾಂಕ: 26.04.2017 ರ ಪತ್ರದಲ್ಲಿ ತಿಳಿಸಿರುವಂತೆ (ಈ ಪತ್ರವನ್ನು ಈಗಾಗಲೇ ಕರ್ನಾಟಕ ಅರಣ್ಯ ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಪಡಿಸಲಾಗಿದೆ) ದಿನಾಂಕ: 18.09.2017 ರಂದು ನಿಮ್ಮ ಹೆಸರಿನ ಮುಂದೆ ನಮೂದಿಸಿರುವ ನೇಮಕಾತಿ ಪ್ರಾಧಿಕಾರದ ಮುಂದೆ ಹಾಜರಾಗುವುದು ಹಾಗೂ ಸಂಬಂಧಿಸಿದ ನೇಮಕಾತಿ ಪ್ರಾಧಿಕಾರದ ಮಾರ್ಗದರ್ಶನದಂತೆ ಸೂಕ್ತ ಕ್ರಮವನ್ನು ಕೈಗೊಳ್ಳಲು ತಿಳಿಸಿದೆ.

12/9/17

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಮುಖ್ಯಸ್ಥರು, ಅರಣ್ಯ ಪಡೆ)

1. ಪ್ರತಿಯನ್ನು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ), ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
2. ಪ್ರತಿಯನ್ನು ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮೌಲ್ಯಮಾಪನ, ಕಾರ್ಯಯೋಜನೆ, ಸಂಶೋಧನೆ ಮತ್ತು ತರಬೇತಿ), ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
3. ಪ್ರತಿಯನ್ನು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮಾನವ ಸಂಪನ್ಮೂಲ ಅಭಿವೃದ್ಧಿ), ಅರಣ್ಯ ತರಬೇತಿ ಸಂಸ್ಥೆ, ಗುಂಗರಘಟ್ಟಿ, ಧಾರವಾಡ ಇವರಿಗೆ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ ಹಾಗೂ ಈ 36 ಅರಣ್ಯ ರಕ್ಷಕ ಅಭ್ಯರ್ಥಿಗಳಿಗೆ ಆದಷ್ಟು ಶೀಘ್ರವಾಗಿ ವೃತ್ತಿ ತರಬೇತಿಯನ್ನು ಪ್ರಾರಂಭಿಸಲು ತಿಳಿಸಿದೆ ಹಾಗೂ ಸದರಿ ಅಭ್ಯರ್ಥಿಗಳನ್ನು ತರಬೇತಿ ಸಂಸ್ಥೆವಾರು ಹಂಚಿಕೆ ಮಾಡಲು ಕ್ರಮ ಕೈಗೊಳ್ಳುವುದು.
4. ಪ್ರತಿಯನ್ನು ದಿನಾಂಕ: 12-09.2017 ರಂದು ಪ್ರಕಟಗೊಂಡಿರುವ 36 ಅರಣ್ಯ ರಕ್ಷಕ ಅಭ್ಯರ್ಥಿಗಳಿಗೆ ಕಳಿಸುತ್ತಾ, ಈ ಪತ್ರದಲ್ಲಿ ತಿಳಿಸಿರುವಂತೆ ಕ್ರಮ ಕೈಗೊಂಡು, ದಿನಾಂಕ: 18.09.2017 ರಂದು ನಿಮ್ಮ ಹೆಸರಿನ ಮುಂದೆ ನಮೂದಿಸಿರುವ ಅರಣ್ಯ ಸಂರಕ್ಷಣಾಧಿಕಾರಿ / ಉಪ ಅರಣ್ಯ ಸಂರಕ್ಷಣಾಧಿಕಾರಿ ಇವರ ಸಮ್ಮುಖ ಹಾಜರಾಗಲು ತಿಸಲಾಗಿದೆ ಮತ್ತು ಇಂಡೆಮ್ನಿಟಿ ಬಾಂಡ್‌ನ ಮಾದರಿ ಹಾಗೂ ಕರಾರು ಪತ್ರದ ಮಾದರಿ ಮತ್ತು ಪೋಲೀಸ್ ತಪಾಸಣಾ ವರದಿಯ ಮಾದರಿ ನಮೂನೆಯನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಪಡಿಸಲಾಗಿದ್ದು, ಇವುಗಳನ್ನು ಭರ್ತಿ ಮಾಡಿ, ಹಾಜರಾಗಲು ತಿಳಿಸಿದೆ.